ಏನೂ ಹೇಳಲಿಲ್ಲ. ಆದರೆ ಮನಸ್ಸಿಗೆ ಬೇಜಾರಾಯಿತು. ಪ್ರತಿಮಾ ಅವಳಿಗೆ ಬಹಳ ದಿನಗಳಿಂದ ಪರಿಚಯ. ಒಟ್ಟಿಗೆ ಓದಿದವರು. ಅವಳು ತನ್ನ ನೋವು ನಲಿವುಗಳನ್ನು ಬೃಂದಾಳ ಜೊತೆ ಹಂಚಿಕೊಳ್ಳುತ್ತಿದ್ದಳು. ಹಿಂದೆ ಒಮ್ಮೆ ನೀನು ಪಿ.ಎಚ್.ಡಿ ಮಾಡು ಪ್ರತಿಮಾ ಎಂದಾಗ ನನಗೆ ಯಾಕೆ ಬೇಕು ಅದೆಲ್ಲಾ? ಬರುವ ಸಂಬಳ ಸಾಕು. ನನಗೆ ಬದುಕಿನಲ್ಲೇ ಆಸಕ್ತಿ ಇಲ್ಲ. ಮುಂದೆ ಓದಿ ಏನ್ಮಾಡಬೇಕು? ಎಂದಿದ್ದಳು.

ಎಂ.ಎ. ಮಾಡುವಾಗ ಅವಳು ತನ್ನ ಸಹಪಾಠಿ ಶಂಕರೇಗೌಡನನ್ನು ಪ್ರೀತಿಸಿದ್ದಳು. ಅವರು ಮೈಸೂರಿನಲ್ಲಿ ಓಡಾಡದ ಜಾಗವಿರಲಿಲ್ಲ. ಗಂಗೋತ್ರಿಯಲ್ಲಿ ಅವರದೇ ಮಾತು. ಶಂಕರಗೌಡ ತುಂಬಾ ಶ್ರೀಮಂತ. ಅವನಿಗೆ ಕೆಲಸ ಮಾಡುವ ಉದ್ದೇಶವಿರಲಿಲ್ಲ. ಲೈಫ್ ಇರುವುದೇ ಎಂಜಾಯ್ ಮಾಡುವುದಕ್ಕೆ. ಗಂಗೋತ್ರಿ ಲೈಫ್ ಹೇಗಿರುತ್ತದೆ ನೋಡಲು ಬಂದಿದ್ದೇನೆ ಎನ್ನುತ್ತಿದ್ದ. ಎಂ.ಎ. ಮುಗಿದ ಮೇಲೆ ಮದುವೆ ಆಗೋಣ ಎನ್ನುತ್ತಿದ್ದ. ಪ್ರತಿಮಾ ತಾಯಿ, ಅಣ್ಣ ಎಲ್ಲರಿಗೂ ಈ ವಿಷಯ ಗೊತ್ತಿತ್ತು. ಶಂಕರೇಗೌಡ ನಮ್ಮಿಂದೆ ನನ್ನ ಇಚ್ಚೆಗೆ ಅಡ್ಡಿ ಬರಲ್ಲ. ನೀನೇನು ಹೆದರಬೇಡ. ನಮ್ಮ ತಂದೆತಾಯೀನ್ನ ಒಪ್ಪಿಸುವ ಜವಾಬ್ದಾರಿ ನನ್ನದು ಎನ್ನುತ್ತಿದ್ದ. ಪರೀಕ್ಷೆ ಮುಗಿದಿತ್ತು. ಶಂಕರೇಗೌಡನ ಮನೆಯವರು ಮದುವೆಗೆ ಒಪ್ಪಿರಲಿಲ್ಲ. ನೀನು ನಮ್ಮ ವಂಶದ ಒಬ್ಬನೇ ಮಗ. ನಮ್ಮ ಕುಲದ ಹುಡುಗೀನ್ನೇ ಮದುವೆ ಆಗಬೇಕು. ಬ್ರಾಹ್ಮಣರ ಮನೆ ಹುಡುಗಿ ಬೇಡ. ಹಂಗೆ ಮದುವೆ ಮಾಡಿದ್ರೆ ದೇವರ ಶಾಪ ತಟ್ಟದೆ ಎಂದುಬಿಟ್ಟಿದ್ದರು.

ಪ್ರತಿಮಾ ಕುಗ್ಗಿಹೋಗಿದ್ದಳು. ಇದೇ ವೇಳೆಯಲ್ಲಿ ಅವಳಣ್ಣ ಯುಎಸ್‌ಗೆ ಹೋದವನು ತಾನು ಮೆಚ್ಚಿದ ಹುಡುಗಿಯನ್ನು ಮದುವೆಯಾಗಿದ್ದ. ಬೃಂದಾ ಅವಳನ್ನು ಒತ್ತಾಯ ಮಾಡಿ ಬೆಂಗಳೂರಿಗೆ ಬರುವಂತೆ ಮಾಡಿದ್ದಳು. ಪ್ರತಿಮಾಗೆ ಮೊದಲು ಜೂನಿಯರ್ ಕಾಲೇಜ್‌ನಲ್ಲಿ ಲೆಕ್ಚರರ್ ಕೆಲಸ ಸಿಕ್ಕಿತ್ತು. ನಂತರ ಡಿಗ್ರಿ ಕಾಲೇಜಿನಲ್ಲಿ ಕೆಲಸಕ್ಕೆ ಸೇರಿದ್ದಳು. ಅವಳ ತಾಯಿ ಬೇರೆ ಹುಡುಗನನ್ನು ನೋಡಲು ಪ್ರಯತ್ನಿಸಿದ್ದರು. ಆದರೆ ಪ್ರತಿಮಾ ಒಪ್ಪಿರಲಿಲ್ಲ. ತಾಯಿ ಹೋದ ಮೇಲೆ ಅವಳು ತುಂಬಾ ಮಂಕಾಗಿದ್ದಳು. ಅವಳನ್ನು ಒಂಟಿತನ ಕಾಡಬಾರದೆಂದು ಬೃಂದಾ ಹಬ್ಬಗಳಿಗೆ ಅವಳನ್ನು ಆಹ್ವಾನಿಸುತ್ತಿದ್ದಳು. ಆದರೆ ಇದ್ದಕ್ಕಿದ್ದಂತೆ ಬದಲಾದ ಅವಳ ವರ್ತನೆಗೆ ಕಾರಣವೇನು? ಅವಳು ಯೋಚಿಸಿ ತಲೆಕೆಡಿಸಿಕೊಂಡಳು. ಪವನ್ ತನಗೆ ತಿಳಿದಂತೆ ಸಮಾಧಾನ ಮಾಡಿದ.

ಬೃಂದಾ ತನ್ನ ಪ್ರಯತ್ನ ಬಿಡಲಿಲ್ಲ. ಮೈಸೂರಿನಲ್ಲಿ ಲೆಕ್ಚರರ್ ಆಗಿದ್ದ ಕಾತ್ಯಾಯಿನಿಗೆ ಫೋನ್ ಮಾಡಿ ಪ್ರತಿಮಾಳ ವಿಚಾರ ಹೇಳಿದಳು. ಪ್ರತಿಮಾ ಮೈಸೂರಿನ ಯಾವ ಕಾಲೇಜ್‌ನಲ್ಲಿದ್ದಾಳೆ ವಿಚಾರಿಸ್ತೀಯಾ?

ಪ್ರಯತ್ನಪಡ್ತೀನಿ. ಅವಳು ಕೆಲಸ ಮಾಡ್ತಿದ್ದ ಕಾಲೇಜ್ ಹೆಸರು ಕಳುಹಿಸು. ಅದರ ಬ್ರಾಂಚ್ ಆದರೆ ವಿಚಾರಿಸಬಹುದು. ಆಗಲಿ ಕಳಿಸ್ತೀನಿ ಎಂದಳು ಬೃಂದಾ.

ತಕ್ಷಣವೇ ಪ್ರತಿಮಾಳ ಕಾಲೇಜು ಹೆಸರು ಕಳಿಸಿದಳು. ವಾರದ ನಂತರ ಕಾತ್ಯಾಯಿನಿ ಫೋನ್ ಮಾಡಿ ಹೇಳಿದಳು.

ಸಾರಿ ಬೃಂದಾ. ವಿಚಾರಿಸೋದು ತಡವಾಯಿತು. ವಿಷಯ ಏನು ಹೇಳು. ಪ್ರತಿಮಾ ಅಲ್ಲಿಲ್ಲವಂತೆ. ಒಂದು ವಾರ ಕೆಲಸ ಮಾಡಿ ರಿಸೈನ್ ಮಾಡಿದಳಂತೆ.

ಹೌದಾ?

ಈಗ ಮೈಸೂರಿನಲ್ಲಿ ತುಂಬಾ ಕಾಲೇಜುಗಳಾಗಿವೆ. ನನಗೆ ಪರಿಚಯವಿರುವ ಕಡೆ ವಿಚಾರಿಸಿ ತಿಳಿಸ್ತೇನೆ ಎಂದಳು ಕಾತ್ಯಾಯಿನಿ.

ತಿಂಗಳುಗಳು ಉರುಳಿದರೂ ಪ್ರತಿಮಾ ಬಗ್ಗೆ ತಿಳಿಯಲಿಲ್ಲ. ವರ್ಷಗಳು ಉರುಳಿದವು. ಬೃಂದಾಳ ಮಗಳು ಪಿ.ಯು.ಸಿಗೆ ಬಂದಳು. ಪವನ್ ಕಟ್ಟುನಿಟ್ಟಾಗಿ ಹೆಂಡತಿಗೆ ಹೇಳಿದ. ನೀನು ಇಷ್ಟು ದಿನ ಕೆಲಸ ಮಾಡಿದ್ದು ಸಾಕು. ನೀನು ವಾಲಂಟರಿಗೆ ಅಪ್ಲೈ ಮಾಡು.

ಯಾಕೆ? ಸಿಂಧು ಪಿ.ಯು.ಸಿಗೆ ಬಂದಿದ್ದಾಳೆ. ಸುಹಾಸ್ ಹೈಸ್ಕೂಲಿಗೆ ಬಂದಾಯಿತು. ನಮ್ಮ ಜವಾಬ್ದಾರಿ ಹೆಚ್ಚಾಗಿದೆ. ಮಕ್ಕಳ ಬೇಕು ಬೇಡ ಗಮನಿಸಲು ಮನೆಯಲ್ಲಿ ಒಬ್ಬರು ಇರಬೇಕು.




ವಾಲಂಟರಿ ತೆಗೆದುಕೊಂಡ್ರೆ ಪೆನ್ಷನ್ ಜಾಸ್ತಿ ಬರಲ್ಲಾರಿ.

ಬರುವಷ್ಟು ಪೆನ್ಷನ್ ಸಾಕು. ನೀನು ಬೇಕಾದರೆ ಮನೆಯ ಹತ್ತಿರವೇ ಜೆರಾಕ್ಸ್ ಅಂಗಡಿ ಇಡು.

ಅದೆಲ್ಲಾ ಆಗಲ್ಲಾರಿ. ಹಾಗಾದ್ರೆ ಮೇಲೆ ಎರಡು ಬೆಡ್‌ರೂಂ ಮನೆ ಕಟ್ಟಿಸಿ ಬಾಡಿಗೆಗೆ ಕೊಡೋಣ. 25 ಸಾವಿರ ಬಾಡಿಗೆ ಬರುತ್ತದೆ. ಅದನ್ನು ನೀನೇ ತೊಗೋ. ನನ್ನದೇ ಬೇರೆ ಹಣ ಇರಲೀಂತ ನಾನು ಯಾವತ್ತೂ ಬಯಸಿಲ್ಲ. ನೀವು ಮನೆ ಖರ್ಚು ವಹಿಸಿಕೊಳ್ಳುವಾಗ ನಾನ್ಯಾಕೆ ಬೇಡ ಅನ್ನಲಿ. ಮನೆ ಮಾತ್ರ ಕಟ್ಟಿಸಬೇಡಿ. ಯಾಕೆ? ನೀವು ರಿಟೈರ್ ಆಗುವ ವೇಳೆಗೆ ಮಕ್ಕಳು ಸೆಟ್ಲ್ ಆಗಿರ್ತಾರೆ. ನಾವು ಮೈಸೂರಿಗೆ ಹೋಗಿ ಇರೋಣ.

ಅದಕ್ಕೂ ಮನೆ ಕಟ್ಟಿಸುವುದಕ್ಕೂ ಏನು ಸಂಬಂಧ? ಮನೆ ಕಟ್ಟಿಸೋದೂಂದ್ರೆ ಜವಾಬ್ದಾರಿ. ಮನೆಪೂರ್ತಿ ಆಗುವವರೆಗೂ ನಾವು ಎಲ್ಲಿಗೂ ಹೋಗಕ್ಕಾಗಲ್ಲ. ನಾನು ಮಕ್ಕಳ ಕಡೆ ಗಮನ ಕೊಡುವುದಕ್ಕೂ ಆಗಲ್ಲ. ಹಾಗಾದ್ರೆ ನೀನು ರಿಟೈರ್ ಆದಾಗ ಬರುವ ಹಣದಲ್ಲಿ ಒಂದು ಸೈಟ್ ತೆಗೆದುಕೊಳ್ಳೋಣ. ಹಾಗೇ ಮಾಡಿ ಎಂದಳು ಬೃಂದಾ.

ಸಿಂಧು ಪಿ.ಯು.ಸಿ ಮುಗಿಸಿ ಬಿ.ಇ.ಗೆ ಸೇರಿದಳು. ಸುಹಾಸ್ ಎಸ್.ಎಸ್.ಎಲ್.ಸಿಗೆ ಬಂದ. ಬೃಂದಾ ಆರಾಮವಾಗಿ ಮನೆಯಲ್ಲಿದ್ದಳು. ಮಕ್ಕಳನ್ನು ತುಂಬಾ ಚೆನ್ನಾಗಿ ಬೆಳೆಸಿದಳು. ಸಿಂಧು ನಿನಗೆ ಮೊಬೈಲ್ ಕೊಡಿಸಿದ್ದೇವೆ ನಿಜ. ಆದರೆ ಅದರಲ್ಲೇ ಮುಳುಗಿರಬಾರದು. ಮನೆಗೆ ಯಾರು ಬಂದರೂ ಮಾತನಾಡಿಸಬೇಕು. ಊಟ, ತಿಂಡಿ ಮಾಡುವಾಗ ಮೊಬೈಲ್ ನೋಡಬಾರದು. ಮಕ್ಕಳು ತಾಯಿಯ ಆದೇಶದಂತೆ ನಡೆದುಕೊಳ್ಳುತ್ತಿದ್ದರು. ಸಿಂಧು ತಾಯಿಯಂತೆ ಸ್ನೇಹಜೀವಿ. ಯಾರಾದರೂ ತೊಂದರೆಯಲ್ಲಿದ್ದಾರೆಂದು ತಿಳಿದರೆ ಕರಗಿಬಿಡುತ್ತಿದ್ದಳು. ಸುಹಾಸ್ ಮಿತಭಾಷಿ. ಶಾಲೆಯಲ್ಲಿ ತುಂಬಾ ಒಳ್ಳೆಯ ಹೆಸರು ತೆಗೆದುಕೊಂಡಿದ್ದ.

ಹಬ್ಬಹರಿದಿನಗಳಲ್ಲಿ ಬೃಂದಾಗೆ ಪ್ರತಿಮಾಳ ನೆನಪಾಗುತ್ತಿತ್ತು. ಹಬ್ಬದ ದಿನ ಗಂಡ, ಮಕ್ಕಳು ಸಹಾಯ ಮಾಡುತ್ತಿದ್ದರು. ಕೆಳಗೆ ಕುಳಿತು ಬಾಳೆ ಎಲೆ ಹಾಕಿ ಬಡಿಸುತ್ತಿದ್ದಳು. ಊಟದ ನಂತರ ಪವನ್ ಎಲೆ ಮಡಚಿಕೊಡು ಎನ್ನುತ್ತಿದ್ದ. ವೀಳೆಯ ಹಾಕಿಕೊಳ್ಳುತ್ತಾ ಗಂಡಹೆಂಡತಿ ಹಳೆಯ ದಿನಗಳ ನೆನಪು ಮಾಡಿಕೊಳ್ಳುತ್ತಿದ್ದರು. ಬೃಂದಾಳಿಗೆ ಹೃದಯದ ಮೂಲೆಯಲ್ಲಿ ಪ್ರತಿಮಾಳ ವಿಚಾರವಾಗಿ ನೋವಿತ್ತು. ಒಂದು ಶನಿವಾರ ಸಾಯಂಕಾಲ ಬೃಂದಾ ಟಿ.ವಿ. ನೋಡುತ್ತಿದ್ದಾಗ ಫೋನ್ ರಿಂಗಾಯಿತು. ಅವಳು ನಂಬರ್ ನೋಡಿದಳು. ಪರಿಚಿತ ನಂಬರ್ ಅನ್ನಿಸಲಿಲ್ಲ.

ಹಲೋ

ಹಲೋ, ನಾನು ಪ್ರತಿಮಾ

ಯಾವ ಪ್ರತಿಮಾ?

ಬೃಂದಾ, ನಾನು ನಿನಗೆ ನೆನಪಿಲ್ಲವಾ? ನಿನ್ನ ಕ್ಲಾಸ್‌ಮೇಟ್, ಫ್ರೆಂಡ್; ಆ ಹೆಸರಿನವರೊಬ್ಬರು ಫ್ರೆಂಡ್ ಇದ್ದರು. ಆದ್ರೆ ಅವರಿಗೆ ನನ್ನ ಫ್ರೆಂಡ್‌ಶಿಪ್ ಬೇಡವಾಯ್ತು. ನಾನು ಆ ವಿಚಾರ ನಿನಗೆ ಹೇಳಬೇಕು. ದಯವಿಟ್ಟು ನೀನು, ನಿನ್ನ ಗಂಡ ಈ ಭಾನುವಾರ ನಮ್ಮನೆಗೆ ಬರಬೇಕು.

ನೀನು ಬೆಂಗಳೂರಿನಲ್ಲಿದ್ದೀಯಾ?

ಇಲ್ಲ ಮೈಸೂರಿನಲ್ಲಿದ್ದೀನಿ. ನೀನು ಬಾ ಗೊತ್ತಾಗತ್ತೆ.

ನಾನು ನಮ್ಮನೆಯವರನ್ನು ಕೇಳಿ ಹೇಳ್ತೀನಿ.

ಹಾಗೆ ಮಾಡು. ಅವಳು ಗಂಡನಿಗೆ ವಿಷಯ ತಿಳಿಸಿದಳು. ಪವನ್ ಹೇಳಿದ. ಈ ಭಾನುವಾರ ತಾನೆ? ಹೋಗೋಣ. ನನ್ನ ಫ್ರೆಂಡ್ ಮುರಳಿ ಒಂದು ಸೈಟ್ ಹೇಳಿದ್ದ. ವಿಜಯನಗರ 4ನೇ ಹಂತದಲ್ಲಿದೆಯಂತೆ. ಅದನ್ನು ನೋಡಿಕೊಂಡು, ನಿನ್ನ ಫ್ರೆಂಡ್ ಮನೆಗೂ ಹೋಗಿ ಬರೋಣ. ಪವನ್ ಒಪ್ಪಿದ. ಶನಿವಾರವೇ ಪವನ್ ಚಿಕ್ಕಮ್ಮ ರುಕ್ಮಿಣಿ ಬಂದರು. ನೀವು ಹೋಗಿ ಬನ್ನಿ. ನಾನು ಮನೆಯಲ್ಲಿರ್ತೀನಿ.